# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಬೃ.ಬೆ.ಮ.ಪಾ/ಸಕಾಅ/ಬೊಉ/ಪಿಆರ್/101/2021-22

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ
ಬೊಮ್ಮನಹಳ್ಳಿ ಉಪವಿಭಾಗ
ಕೋಡಿಚಿಕ್ಕನಹಳ್ಳಿ ಮುಖ್ಯರಸ್ತೆ, ಬಿಳೇಕಹಳ್ಳಿ
ಬೆಂಗಳೂರು-560076. ದಿನಾಂಕ: 13/08/2021

## 188 ಬಿಳೇಕಹಳ್ಳಿ ವಾರ್ಡ್ ಸಮಿತಿ ಸಭೆಯ ನಡವಳಿಗಳು

***********

ದಿನಾಂಕ:- 13/08/2021 ಬೆಳಿಗ್ಗೆ 10:30 ಗಂಟೆಗೆ ವಾರ್ಡ್ ಸಮಿತಿ ಸಭೆಯನ್ನು ಶ್ರೀ ಅಂಜಿನಪ್ಪ ಸಿ.ಟಿ ನೋಡಲ್ ಅಧಿಕಾರಿರವರ ಅಧ್ಯಕ್ಷತೆಯಲ್ಲಿ ನಡೆದ ನಡವಳಿಗಳು.

**ವಾರ್ಡ್ ಸಮಿತಿಯ ಹಾಜರಾದ ಸದಸ್ಯರು:-**

| | | | |
|---|---|---|---|
| 1. | ಶ್ರೀ ಅಂಜಿನಪ್ಪ ಸಿ.ಟಿ | - | ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು. |
| 2. | ಶ್ರೀ ಗಿರೀಶ್ ಕೆ | - | ಕಾರ್ಯದರ್ಶಿಗಳು ಹಾಗೂ ಸಹಯಕ ಅಭಿಯಂತರರು ವಾರ್ಡ್-188 |
| 3. | ಶ್ರೀ ಹೆಚ್.ಎಂ. ಶೆಟ್ಟಿ | - | ವಿಜಯಾ ಬ್ಯಾಂಕ್ ಲೇಔಟ್ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು. |
| 4. | ಶ್ರೀ ಡಿ.ಎಸ್. ಶೆಟ್ಟಿ | - | ವಿಜಯಾ ಬ್ಯಾಂಕ್ ಲೇಔಟ್ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು. |
| 5. | ಶ್ರೀ ಎ.ಜೆ ಬಂಢಾರಿ | - | ಎಂ.ಎಸ್.ಆರ್.ಎಸ್ ನಗರ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು. |
| 6. | ಶ್ರೀ ಗೋಪಾಲ್‌ಕೃಷ್ಣ ಭಟ್ಟ್ | - | ಎಂ.ಎಸ್.ಆರ್.ಎಸ್ ನಗರ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು. |
| 7. | ಶ್ರೀ ರಾಜಿ ಕಂಡಿಗೆ | - | ಸಾರ್ವಭೌಮ ನಗರ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು. |
| 8. | ಶ್ರೀ ರಮಾನಂದ್ ಹೆಗ್ಡೆ | - | ವಿಜಯಾ ಬ್ಯಾಂಕ್ ಲೇಔಟ್ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು. |
| 9. | ಶ್ರೀ ಸಂತೋಷ್ ರಾವ್ | - | ವಿಜಯಾ ಬ್ಯಾಂಕ್ ಲೇಔಟ್ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು. |

**ವಾರ್ಡ್ ಸಮಿತಿ ಸಭೆಗೆ ಹಾಜರಾದ ಅಧಿಕಾರಿಗಳು:-**

| | | | |
|---|---|---|---|
| 1. | ಡಾ. ಕೃಷ್ಣಪ್ಪ | - | ಪಿ.ಎಚ್.ಸಿ ಕೆ.ಸಿ ಹಳ್ಳಿ. |
| 2. | ಶ್ರೀ ಅಮಿತ್ ಕುಮಾರ್ | - | ಸಹಾಯಕ ಅಭಿಯಂತರರು (BESCOM). |
| 3. | ಶ್ರೀ ರಮೇಶ್ | - | ಕಂದಾಯ ಪರಿವೀಕ್ಷಕರು. |
| 4. | ಮಹಮದ್ ಜಾವಿದ್ | - | ಸಹಾಯಕ ಕಾರ್ಯಪಾಲಕ ಅಭಯಂತರರು (SWM). |
| 5. | ಶ್ರೀ ಪ್ರಕಾಶ್ | - | ಆರೋಗ್ಯ ಪರಿವೀಕ್ಷಕರು. |
| 6. | ಶ್ರೀ ವಿಕ್ರಾಂತ್ ಕೆ | - | ಸಹಾಯಕ ಅಭಿಯಂತರರು (SWD). |

ಶ್ರೀ ಅಂಜಿನಪ್ಪ ಸಿ.ಟಿ ನೋಡಲ್ ಅಧಿಕಾರಿ ವಾರ್ಡ್-188 ಬಿಳೇಕಹಳ್ಳಿ ರವರು ಸಭೆಯಲ್ಲಿ ಹಾಜರಿದ್ದ ವಾರ್ಡ್ ಸಭೆಯ ಸದಸ್ಯರು ಹಾಗೂ ಹಾಜರಿದ್ದ ಅಧಿಕಾರಿಗಳನ್ನು ಸ್ವಾಗತಿಸಿ ಮಾತನಾಡುತ್ತಾ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಸಾರ್ವಜನಿಕರ ನಡುವೆ ಸಮನ್ವಯ ಸಾಧಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪ್ರತಿ ವಾರ್ಡಿಗೆ ನೋಡಲ್ ಅಧಿಕಾರಿಗಳನ್ನು ನೇಮಿತಿ, ಸಾರ್ವಜನಿಕ ಕುಂದು ಕೊರತೆ ನಿವಾರಣ ಸಂಬಂಧ ವಾರ್ಡ್‌ನ ಕುಂದು ಕೊರತೆಗಳನ್ನು ಚರ್ಚಿಸುವುದಾಗಿ ತಿಳಿಸಿದರು.

- **ಬೃಹತ್ ನೀರುಗಾಲುವೆ ಬಗ್ಗೆ**

ವಿಜಯಾ ಬ್ಯಾಂಕ್ ಮುಖ್ಯರಸ್ತೆಯಿಂದ ಭೂದೇವಿ ದೇವಸ್ಥಾನದ ರಸ್ತೆಯ ವರೆಗೆ ರಸ್ತೆಯ ಭದಿಯ ಮೋರಿಗಳಲ್ಲಿ ಹೂಳು ತುಂಬಿಕೊಂಡಿರುವುದರಿಂದ ಮಳೆ ಬಂದ ಸಮಯದಲ್ಲಿ ರಸ್ತೆಯ ಮೇಲೆ ನೀರು ತುಂಬಿ ಮನೆಯ ಒಳಗೆ ನುಗ್ಗುತ್ತಿರುವುದಾಗಿ ವಾರ್ಡ್ ಸದಸ್ಯರುಗಳು ಸಭೆಯಲ್ಲಿ ತಿಳಿಸಿದರು. ಸದರಿ ವಿಷಯದ ಸಂಬಂಧ ಸಭೆಯಲ್ಲಿ ಹಾಜರಿದ್ದ ಬೃಹತ್ ನೀರುಗಾಲುವೆಯ ಸಹಾಯಕ ಅಭಿಯಂತರರ ವಿಕ್ರಾಂತ್ ಕೆ ರವರು ಸದರಿ ರಸ್ತೆಯಲ್ಲಿ ಒಂದು ವಾರದೊಳಗೆ ಕಾಮಗಾರಿಯನ್ನು ಪ್ರಾರಂಭಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

Scanned with CamScanner

- **ಕಸ ಸಮಸ್ಯೆ ಮತ್ತು ನಿರ್ವಹಣೆ ಬಗ್ಗೆ**

ರಂಕಾ ಕಾಲೋನಿಯ ಮುಖ್ಯರಸ್ತೆಯಲ್ಲಿ ಬಿ.ಟಿ.ಎಂ ಬಡಾವಣೆ, ಬಿಳೇಕಹಳ್ಳಿ ವಾರ್ಡ್‌ಗೆ ಹೊಂದಿಕೊಂಡಿರುವ ಬನಶಂಕರಿ ವಿಧಾನಸಭಾ ಕ್ಷೇತ್ರ ಕೆಲವು ಬಡಾವಣೆಯ ನಿವಾಸಿಗಳು ಮನೆಯ ಕಸವನ್ನು ರಸ್ತೆಯ ಬಧಿ ಹಾಕುತ್ತಿರುವುದಾಗಿ ವಾರ್ಡಿನ ಸದಸ್ಯರು ಶ್ರೀ ಸುರೇಶ್ ಪ್ರಕಾಶ್ ರವರು ಸಭೆಯಲ್ಲಿ ತಿಳಿಸಿದರು. ಸದರಿ ವಿಷಯದ ಸಂಬಂಧ ಅರೋಗ್ಯ ಪರಿವೀಕ್ಷಕರು ಶ್ರೀ ಪ್ರಕಾಶ್ ರವರು ಪ್ರತಿಕ್ರಿಯಿಸಿ ಸದರಿ ವಿಷಯದ ಬಗ್ಗೆ ಕ್ರಮಜರುಗಿಸಲಾವುದಾಗಿ ತಿಳಿಸಿರುತ್ತಾರೆ.

ಮುಂದುವರೆದು, ವಿಜಯಾ ಬ್ಯಾಂಕ್ ಲೇಔಟ್ ಕ್ಷೇಮಾಭಿವೃಧ್ಧಿ ಸಂಘದ ಸದಸ್ಯರುಗಳು ಬಡಾವಣೆಗಳಲ್ಲಿರುವ ಉದ್ಯಾನವನಗಳಲ್ಲಿ ಒಣ ಎಲೆಗಳು ಶೇಕರಣೆಗೊಂದಿದು ತುರ್ತಾಗಿ ವಿಲೇವಾರಿ ಮಾಡಿ ಕ್ರಮಕೈಗೊಳ್ಳಬೇಕೆಂದು ಸಭೆಯಲ್ಲಿ ತಿಳಿಸಿದರು, ಸದರಿ ವಿಷಯದ ಸಂಬಂಧ ಅರೋಗ್ಯ ಪರಿವೀಕ್ಷಕರು ಶ್ರೀ ಪ್ರಕಾಶ್ ರವರು ಪ್ರತಿಕ್ರಿಯಿಸಿ ಸದರಿ ವಿಷಯದ ಬಗ್ಗೆ ಕ್ರಮಜರುಗಿಸಲಾವುದಾಗಿ ತಿಳಿಸಿರುತ್ತಾರೆ.

- **ಬಿಡಬ್ಲ್ಯೂಎಸ್‌ಎಸ್‌ಬಿ ಸಮಸ್ಯೆಗಳ ಬಗ್ಗೆ**

ರಂಕಾ ಕಾಲೋನಿಯ ಮುಖ್ಯರಸ್ತೆಯಲ್ಲಿ ಮ್ಯಾನ್‌ಹೋಲ್‌ಗಳು ತುಂಬಿ ಹರಿಯುತ್ತಿದ್ದು ಸಾರ್ವಜನಿಕರ ವಾಹನ ಹಾಗೂ ಓಡಾಟಕ್ಕೆ ತೊಂದರೆ ಉಂಟಾಗುತ್ತಿದ್ದು ಸದರಿ ಮ್ಯಾನ್‌ಹೋಲ್‌ಗಳ ದುರಸ್ಥಿ ಕಾಮಗಾರಿಯನ್ನು ನಿರ್ವಹಿಸಲು ವಾರ್ಡಿನ ಸದಸ್ಯರು ಶ್ರೀ ಸುರೇಶ್ ಪ್ರಕಾಶ್ ರವರು ಸಭೆಯಲ್ಲಿ ತಿಳಿಸಿದರು. ಸದರಿ ವಿಷಯದ ಸಂಬಂಧ ನೋಡಲ್ ಅಧಿಕಾರಿಯವರು ಸಂಬಂಧಪಟ್ಟ ಬಿಡಬ್ಲ್ಯೂಎಸ್‌ಎಸ್‌ಬಿ ಸಯಾಹತ ಅಭಿಯಂತರರು ಗೈರಾದ ಕಾರಣ ಸದರಿಯವರಿಗೆ ದೂರವಾಣಿ ಮೂಲಕ ಸಂಪರ್ಕಿಸಿ ಈ ವಿಷಯದ ಬಗ್ಗೆ ಕ್ರಮಕೈಗೊಳ್ಳಲು ಸೂಚಿಸುವಂತೆ ಕಾರ್ಯದರ್ಶಿಗಳಿಗೆ ತಿಳಿಸಿರುತ್ತಾರೆ.

- **ಬೀದಿ ದೀಪ ನಿರ್ವಹಣೆ ಬಗ್ಗೆ.**

ರಂಕಾ ಕಲೋನಿಯ ಮುಖ್ಯರಸ್ತೆಯಲ್ಲಿರುವ ಬೀಧಿದೀಪ ಕಂಬಗಳಿಗೆ ಅನಧಿಕೃತವಾಗಿ ಓ.ಎಫ್.ಸಿ ಕೇಬಲ್ ಹಗೂ ಇತ್ಯಾದಿ ಕೇಬಲ್‌ಗಳನ್ನು ತೆರೆಯುವ ಸಂಬಂಧ ಸಭೆಯಲ್ಲಿ ವಾರ್ಡಿನ ಸದಸ್ಯರು ಶ್ರೀ ಸುರೇಶ್ ಪ್ರಕಾಶ್ ರವರು ತಿಳಿಸಿದರು. ಈ ವಿಷಯದ ಸಂಬಂಧ ನೋಡಲ್ ಅಧಿಕಾರಿಯವರು ಬಿ.ಬಿ.ಎಂ.ಪಿ ವಿಧ್ಯುತ್ ವಿಭಾಗದ ಅಧಿಕಾರಿಗಳು ಗೈರಾದ ಕಾರಣ ಸದರಿಯವರಿಗೆ ದೂರವಾಣಿ ಮೂಲಕ ಸಂಪರ್ಕಿಸಿ ಈ ವಿಷಯದ ಬಗ್ಗೆ ಕ್ರಮಕೈಗೊಳ್ಳಲು ಸೂಚಿಸುವಂತೆ ಕಾರ್ಯದರ್ಶಿಗಳಿಗೆ ತಿಳಿಸಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನೆಗಳೊಂದಿಗೆ ಈ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು 13/8/21
ವಾರ್ಡ್ ನಂ. 188, ಬಿಳೇಕಹಳ್ಳಿ

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ. 188, ಬಿಳೇಕಹಳ್ಳಿ

***ಪ್ರತಿಯನ್ನು:***

*1. ಮಾನ್ಯ ಜಂಟಿ ಆಯುಕ್ತರು (ಬೊಮ್ಮನಹಳ್ಳಿ) ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.*
*2. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.*
*3. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.*
*4. ಕಛೇರಿ ಪ್ರತಿ.*

Scanned with CamScanner